ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5084/2022

ಪ್ರಾ ಸಾ 1 ಚಾ ಸಾ 2

ಹೆಸರುಃ ಲಕ್ಷ್ಮಣ

ತಂದೆಯ ಹೆಸರುಃ ಮಹದೇವು

ವಯಸ್ಸುಃ 29 ವರ್ಷ

ಉದ್ಯೋಗಃ ಚಾಲಕ

ವಾಸಃ ನೀಲನಕೊಪ್ಪಲು

ದಿಃ 30.08.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ಈಗ ನೋಡಿದ ಪಂಚನಾಮೆಯಲ್ಲಿರುವ ರುಜು ನನ್ನದು . ಸದರಿ ದಾಖಲೆಯನ್ನು ನಿಪಿ 1 ಮತ್ತು ಸಾಕ್ಷಿಯ ರುಜುವನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

2. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ.

3. ಸುಮಾರು 4 ವರುಷದ ಹಿಂದೆ ನಾನು ಶ್ರೀರಂಗಪಟ್ಟಣ ಪೊ.ಠಾಣೆಗೆ ಬಂದಿದ್ದಾಗ ಪೊಲೀಸರು ನಿಪಿ 1 ಪಂಚನಾಮೆಗೆ ನನ್ನ ರುಜುವನ್ನು ನಿಪಿ 1 ಎ ರಂತೆ ಪಡೆದುಕೊಂಡಿರುತ್ತಾರೆ .

4. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 4.3.20 ರಂದು ಹನುಮಂತು ಮತ್ತು ಜಾನ್ ಜೋಸೆಫ್ ರವರ ಮನೆಯಲ್ಲಿ ಮಾಡಿದ ಪಂಚನಾಮೆಯನ್ನು ನಾನು ಸಾಕ್ಷಿಕರಿಸಿಲ್ಲ.

5.ಸದರಿ ಆಸಾಮಿಗಳಿಂದ ಯಾವುದೇ ಹಣವನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದನ್ನು ನಾನು ನೋಡಿಲ್ಲ. ಆ ರೀತಿ ದಾಳಿ ಮತ್ತು ಪಂಚನಾಮೆಯನ್ನು ಸಾಕ್ಷೀಕರಿಸಿದ ಸಂಬಂಧವಾಗಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ಆರೋಪಿಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

(ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜಕರ ಕೋರಿಕೆಯಂತೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ.)

ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ

6. ದಿಃ 4.3.20 ರಂದು ಪೊಲೀಸರು ನನ್ನ ಮತ್ತು ಯೋಗೇಶ್ ನನ್ನು ಬರ ಮಾಡಿಕೊಂಡು ಶ್ರೀರಂಗಪಟ್ಟಣ ಕೋಡಿ ಶೆಟ್ಟಿ ಪುರ ಗ್ರಾಮದ ಹಳೆ ಕೊಳಿ ಫಾರಂ ಪಕ್ಕದ ಮನೆಯಲ್ಲಿ ಆರೋಪಿಗಳು ಮಹಿಳೆಯರನ್ನು ಇಟ್ಟುಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದಾರೆಂದು ದಾಳಿ ಮಾಡಿ ದಾಳಿ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಆರೋಪಿಗಳಾದ ಹನುಮಂತ ಮತ್ತು ಜಾನ್ ಜೋಸೆಫನನ್ನು ಮತ್ತು ಮಹಿಳೆಯರಾದ ವನಿತಾ , ಜ್ಯೋತಿ ಮತ್ತು ಮಂಜುಳಾರವರುಗಳನ್ನು ವಶಕ್ಕೆ ತೆಗೆದುಕೊಂಡು ಪ್ರಕರಣಕ್ಕೆ ಸಂಬಂಧಿಸಿದಂತೆ ಅವರುಗಳನ್ನು ವಿಚಾರಿಸಿದಾಗ ಅವರುಗಳು ವೇಶ್ಯಾವಾಟಿಕೆ ನಡೆಸುತ್ತಿದುದನ್ನು ಒಪ್ಪಿಕೊಂಡು ಆರೋಪಿಗಳು ಅದರಿಂದ ಬಂದ ಹಣವನ್ನು ಪೊಲೀಸರ ಮುಂದೆ ರೂ. 3600 ಮತ್ತು 4560 ಹಣಮ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ಸದರಿ ಹಣವನ್ನು ವಶಪಡಿಸಿಕೊಂಡು ನಿಪಿ 1 ರೀತಿಯ ಮಹಜರು ಮಾಡಿ ನನ್ನ ರುಜುವನ್ನು 1ಎ ರಂತೆ ಪಡೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

7. ಆ ಸಂದರ್ಭದಲ್ಲಿ ನಿಪಿ 2ರಂತೆ 1 ಫೋಟೋವನ್ನು ತೆಗೆಸಿರುತ್ತಾರೆ ಎನ್ನುವುದು ಸರಿಯಲ್ಲ.

8. ಘಟನೆಗೆ ಸಂಬಂಧಿಸಿದಂತೆ ಈಗ ಓದಿ ತಿಳಿಸಿದ ನಿಪಿ.3 ರೀತಿಯ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ
ಶ್ರೀ ಎಸ್ ವಿ ವಕೀಲರಿಂದಃ

ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)